ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು-12

ಸಂಖ್ಯೆ:ಪಪೂಶಿಇ/ಪರೀಕ್ಷೆ/ಪ್ರ.ಪಿ.ಪೂ.ಪ/2021-22 ದಿನಾಂಕ:25/04/2022

## ಸುತ್ತೋಲೆ

ವಿಷಯ: 2022ರ ಪ್ರಥಮ ಪಿಯುಸಿ ಪೂರಕ ಪರೀಕ್ಷೆಯನ್ನು ಜಿಲ್ಲಾ ಉಪನಿರ್ದೇಶಕರ ನೇತೃತ್ವದಲ್ಲಿ ಜಿಲ್ಲಾ ಮಟ್ಟದಲ್ಲಿ ನಡೆಸಿ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯ ಹಾಗೂ ಫಲಿತಾಂಶ ಪ್ರಕಟಿಸುವ ಬಗ್ಗೆ.

ಉಲ್ಲೇಖ: 1. ಪಪೂಶಿಇ/ಪರೀಕ್ಷೆ/ಪ್ರ.ಉ.ನೇ.ಜಿ.ಮ/2021-22 ದಿನಾಂಕ 05/02/2022.
2. ಪಪೂಶಿಇ/ಪರೀಕ್ಷೆ/ಪ್ರ.ಪಿ.ಪ/2021-22 ದಿನಾಂಕ 13/04/2022.

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳನ್ವಯ ಮಾರ್ಚ್/ಏಪ್ರಿಲ್ 2022ರ ಪ್ರಥಮ ಪಿಯುಸಿ ವಾರ್ಷಿಕ ಪರೀಕ್ಷೆಗೆ ಸಂಬಂಧಿಸಿದಂತೆ, ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯಗಳನ್ನು ದಿನಾಂಕ:20/04/2022ರೊಳಗೆ ಪೂರ್ಣಗೊಳಿಸಿ ಫಲಿತಾಂಶ ಪಟ್ಟಿಯ ಹಾರ್ಡ್‌ಕಾಪಿ ಮತ್ತು ಕ್ರೋಢೀಕೃತ ಅಂಕಗಳ ವಹಿಯಲ್ಲಿ ವಿಷಯವಾರು ಅಂಕಗಳನ್ನು ನಮೂದಿಸಿ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರಿಂದ ದಿನಾಂಕ: 25/04/2022ರೊಳಗೆ ಅನುಮೋದನೆ ಪಡೆದುಕೊಂಡು, ಅಂಕಗಳನ್ನು ಸ್ಯಾಟ್ಸ್‌ಪೋರ್ಟಲ್‌ನಲ್ಲಿ ಇಂದೀಕರಿಸುವಂತೆ ಈಗಾಗಲೇ ಸೂಚಿಸಲಾಗಿತ್ತು.

ಜಿಲ್ಲಾ ಉಪನಿರ್ದೇಶಕರಿಂದ ಅನುಮೋದನೆ ಪಡೆದು ನಂತರ ಆಯಾ ಕಾಲೇಜಿನ ಪ್ರಾಂಶುಪಾಲರು ದಿನಾಂಕ 30/04/2022ರಂದು ಕಾಲೇಜಿನಲ್ಲಿ ಫಲಿತಾಂಶವನ್ನು(ಅಂಕಗಳ ವಿವರದೊಂದಿಗೆ) ಪ್ರಕಟಿಸಲು ಕ್ರಮ ಕೈಗೊಳ್ಳಲು ಈ ಮೂಲಕ ಸೂಚಿಸಿದೆ.

ದಿನಾಂಕ 30/04/2022ರಂದು ಫಲಿತಾಂಶ ಪ್ರಕಟಿಸುವ ಸಮಯದಲ್ಲಿ ಅನುತ್ತೀರ್ಣ ವಿದ್ಯಾರ್ಥಿಗಳು ಪೂರಕ ಪರೀಕ್ಷೆಗೆ ಶುಲ್ಕ ಪಾವತಿಸಲು ಅನುಕೂಲವಾಗುವಂತೆ ಕಾಲೇಜುಗಳ ಸೂಚನಾ ಫಲಕದಲ್ಲಿ ಪೂರಕ ಪರೀಕ್ಷೆಯ ವಿವರಗಳನ್ನು ಪ್ರಕಟಿಸುವಂತೆ ಪ್ರಾಂಶುಪಾಲರಿಗೆ ಸೂಚಿಸುವುದು. ಅನುತ್ತೀರ್ಣ ವಿದ್ಯಾರ್ಥಿಗಳು ಪೂರಕ ಪರೀಕ್ಷೆಗೆ ಶುಲ್ಕ ಪಾವತಿಸಲು ದಿನಾಂಕ:31/05/2022 ಕೊನೆಯ ದಿನಾಂಕವಾಗಿರುತ್ತದೆ. ಪೂರಕ ಪರೀಕ್ಷೆಗೆ ಶುಲ್ಕವನ್ನು ನಿಯಮಾನುಸಾರ ಪಡೆಯುವುದು. ಪೂರಕ ಪರೀಕ್ಷೆಯನ್ನು ದಿನಾಂಕ:09/06/2022 ರಿಂದ 23/06/2022ರೊಳಗೆ ನಡೆಸುವಂತೆ ಕ್ರಮವಹಿಸಿ, ಜೂನ್ ತಿಂಗಳ ಮೊದಲನೇ ವಾರ ವೇಳಾಪಟ್ಟಿಯನ್ನು ಪ್ರಕಟಿಸುವುದು. ಉತ್ತರ ಪತ್ರಿಕೆಗಳ ಮೌಲ್ಯಮಾಪನವನ್ನು ದಿನಾಂಕ:27/06/2022ರೊಳಗೆ ಪೂರ್ಣಗೊಳಿಸಿ, ಫಲಿತಾಂಶ ಪಟ್ಟಿಯ ಹಾರ್ಡ್‌ಕಾಪಿ ಮತ್ತು ಕ್ರೋಢೀಕೃತ ಅಂಕಗಳ ವಹಿಯಲ್ಲಿ ವಿಷಯವಾರು ಅಂಕಗಳನ್ನು ನಮೂದಿಸಿ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರಿಂದ ಅನುಮೋದನೆ ಪಡೆದು, ಅಂಕಗಳನ್ನು ಸ್ಯಾಟ್ಸ್‌ಪೋರ್ಟಲ್‌ನಲ್ಲಿ ಇಂದೀಕರಿಸುವುದು. ನಂತರ ಆಯಾ ಕಾಲೇಜಿನ ಪ್ರಾಂಶುಪಾಲರು ದಿನಾಂಕ 30/06/2022ರಂದು ಕಾಲೇಜಿನಲ್ಲಿ ಫಲಿತಾಂಶವನ್ನು(ಅಂಕಗಳ ವಿವರದೊಂದಿಗೆ) ಪ್ರಕಟಿಸಲು ಕ್ರಮ ಕೈಗೊಳ್ಳಲು ಈ ಮೂಲಕ ಸೂಚಿಸಿದೆ.

25/04/2022

ನಿರ್ದೇಶಕರು(ಪರೀಕ್ಷೆ)
ಪದವಿ ಪೂರ್ವ ಶಿಕ್ಷಣ ಇಲಾಖೆ

ಇವರಿಗೆ:
1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ- ಮುಂದಿನ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ- ಜಿಲ್ಲಾ ಉಪನಿರ್ದೇಶಕರುಗಳ ಮುಖಾಂತರ ಅಗತ್ಯ ಕ್ರಮಕೈಗೊಳ್ಳಲು.

ಪ್ರತಿಗಳು:
1. ನಿರ್ದೇಶಕರ ಆಪ್ತ ಶಾಖೆ.
2. ಜಂಟಿ ನಿರ್ದೇಶಕರು (ಆಡಳಿತ), (ಮಾ&ಅ), (ಪರೀಕ್ಷೆ) ಮತ್ತು (ಶೈಕ್ಷಣಿಕ) ಪಪೂಶಿಇ.
3. ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಅಂತರ್ಜಾಲದಲ್ಲಿ ಪ್ರಕಟಿಸಲು.
4. ಹೆಚ್ಚುವರಿ ಕಛೇರಿ ಪ್ರತಿ.